MVC No.359/2022 PW-1

**<u>ದಿನಾಂಕ 18.09.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ</u>**

ನನಗೆ ಈಗ 42 ವರ್ಷ ವಯಸ್ಸಾಗಿರುತ್ತದೆ. ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಅಪಘಾತವಾದ ದಿನ ನಮ್ಮ ಮಾವನ ಜಮೀನಿಗೆ ನಾನು ಮತ್ತು ನನ್ನ ಮಗನ ಜೊತೆ ಹೋಗುತ್ತಾ ಇದ್ದೆವು. ಅಪಘಾತ ಪಡಿಸಿದ ವಾಹನ ಶಂಕರ್ ಗೆ ಸೇರಿದ್ದು. ಅವರು ನನಗೆ ಪರಿಚಯವಿಲ್ಲ. ನಾನು ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಾ ಇರಬೇಕಾದರೆ ಹಿಂದುಗಡೆಯಿಂದ ಅಪ್ಪೆ ಆಟೋ ವಾಹನ ಬಂದು ಡಿಕ್ಕಿ ಪಡಿಸಿರುತ್ತದೆ. ಸದರಿ ಆಟೋವನ್ನು ಸಿದ್ದಪ್ಪಜಿ ಚಾಲನೆ ಮಾಡುತ್ತಿದ್ದರು. ಅವರು ಮುನಿಯಪ್ಪನದೊಡ್ಡಿ ಗ್ರಾಮದವರು. ಅಪಘಾತವನ್ನು ನೋಡಿದರವರ ಪ್ರತ್ಯಕ್ಷ ದರ್ಶಿಯವರನ್ನು ಸಾಕ್ಷಿ ಮಾಡಿಸುತ್ತೇನೆ. ನಾನು ಆಟೋದಲ್ಲಿ ಹೋಗುತ್ತಿದ್ದಾಗ ಅಪಘಾಯಿತು ಎಂದರೆ ಸುಳ್ಳು. ನನಗೆ ಬಲಕೈಗೆ ಗಾಯವಾಗಿರುತ್ತದೆ. ಮೂಳೆ ಮುರಿತ ಉಂಟಾಗಿರುತ್ತದೆ. ಸ್ಥಳೀಯ ವರದಾ ಎನ್ನುವವರು ಚಿಕಿತ್ಸೆ ಕೊಡಿಸಿರುತ್ತಾರೆ.ಈ ಬಗ್ಗೆ ದೂರನ್ನು ನಾನೇ ನೀಡಿರುತ್ತೇನೆ. ನನಗೆ ಮದುಸೂದನ್ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಯಾಗಿರುತ್ತಾರೆ. ಅವರನ್ನು ಸಾಕ್ಷಿ ಮಾಡಿಸುತ್ತೇನೆ. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 3 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ ಅಪಘಾತವಾಗುವುದಕ್ಕಿಂತ ಮುಂಚೆ ನಾನು ಕೆಲಸ ಮಾಡಿ ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.